ಬಿ.ಎಂ. ಬಶೀರ್

# ನನ್ನ ಮಸೀದಿಯ ಧ್ವಂಸಗೈದವರಿಗೆ ಕೃತಜ್ಞ...

ಸೂಫಿಯ ಕಣ್ಣಲ್ಲಿ ಹನಿಗಳು

ಇರುವೆ ಪ್ರಕಾಶನ

# ನನ್ನ ಮಸೀದಿಯ ಧ್ವಂಸಗೈದವರಿಗೆ ಕೃತಜ್ಞ...

## ಸೂಫಿಯ ಕಣ್ಣಲ್ಲಿ ಹನಿಗಳು

ಬಿ.ಎಂ. ಬಶೀರ್

ಇರುವೆ ಪ್ರಕಾಶನ
ಮಂಗಳೂರು

NANNA MASEEDIYA DHWAMSA GAIDAVARIGE KRUTAJNA:
A Poem Collections By B.M. Basheer
Published by Iruve Prakashana, Marvel Apartment, Flat No. 301,
1st cross, Shiva Nagara, Opp. Shrinivas College, Mangalore - 575
001. Cell : 9448835621
e-mail: iruveprakashana@gmail.com
bmbasheer12@gmail.com

Copyright : ಲೇಖಕರದ್ದು
First Edition : 2015
Pages : 68
Size : 1/8th Demy
Paper Used : NS Maplitho 80 gsm
Copies : 1000
Price : 75/-

ಮೊದಲನೇ ಮುದ್ರಣ : 2015
ಪುಟಗಳು : 68
ಅಳತೆ : 1/8 ಡೆಮಿ
ಬಳಸಿರುವ ಕಾಗದ : ಎನ್.ಎಸ್. ಮ್ಯಾಪ್ಲಿತೋ 80 ಜಿಎಸ್‌ಎಂ
ಪ್ರತಿಗಳು : 1000

ಬೆಲೆ : ರೂ. 75/-

ಮುಖಪುಟ ವಿನ್ಯಾಸ : ಅರುಣ್ ಕುಮಾರ್ ಜಿ

ಪ್ರಕಾಶಕರು
**ಬಿ.ಎಂ. ಬಶೀರ್**
ಇರುವೆ ಪ್ರಕಾಶನ, ಮಂಗಳೂರು
ಮಾರ್ವೆಲ್ ಅಪಾರ್ಟ್‌ಮೆಂಟ್, ಮನೆ ಸಂಖ್ಯೆ 301,
ಮೊದಲ ತಿರುವು, ಶಿವನಗರ
ಶ್ರೀನಿವಾಸ್ ಕಾಲೇಜು ಎದುರು ರಸ್ತೆ,
ಪಾಂಡೇಶ್ವರ, ಮಂಗಳೂರು–575 001.
ಮೊಬೈಲ್ : 9448835621
ಇ–ಮೇಲ್: iruveprakashana@gmail.com
bmbasheer12@gmail.com

ಮುದ್ರಣ : ರೀಗಲ್ ಪ್ರಿಂಟ್ ಸರ್ವೀಸ್

# ನರಕದ ಹೆಬ್ಬಾಗಿಲಲ್ಲಿ ದಾನಿಗಳ ಹೆಸರು ಕೆತ್ತುವ ಕವನಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ದಿನಗಳನ್ನು ವರ್ಷಗಳಂತೆ ಬದುಕುತ್ತಿರುವವರಿಗೆಲ್ಲ 'ಪೆದಂಬು' ಎಂಬ ಪದ, 'ಧರ್ಮ–ದೇವರುಗಳಷ್ಟೇ' ಪ್ರಿಯವಾದದ್ದು. ಹೊರಗಿನವರಿಗೆ ಈ ಪದವನ್ನು ಹೀಗೆಯೇ ಎಂದು ಪರಿಚಯಿಸಲಾಗುವುದಿಲ್ಲ. ಇದನ್ನು 'ಕಿಚಾಯಿಸುವುದು' ಮತ್ತು 'ರೊಚ್ಚಿಗೆಬ್ಬಿಸುವುದು' ಎಂಬೆರಡು ಪದಗಳ ನಡುವೆ (ನಡುವೆ ಅಂದರೆ, ನಟ್ಟ ನಡುವೆಯಲ್ಲ; ಸಂದರ್ಭ ಸಹಿತವಾಗಿ ಎಡ–ಬಲಕ್ಕೆ ಸರಿಸಬೇಕಾಗುತ್ತದೆ.) ಇರಿಸಬಹುದೇನೋ. ಬಶೀರ್‌ರ ಕವನಗಳನ್ನು ಓದುವಾಗ ಮಾತ್ರವಲ್ಲ, ಬಶೀರ್ ಹೆಸರು ನೆನಪಾದಾಗಲೆಲ್ಲ ಬೇಡವೆಂದರೂ ಆ ಪದ ನೆನಪಾಗುತ್ತದೆ. ಬಹಳ ವರ್ಷಗಳಿಂದ ತಮ್ಮ ಹಸಿ ಹಸಿ ಸಂಕಟಗಳ ಒಲೆಯಲ್ಲಿ ಬೇಯಿಸಿದ ಪದ್ಯಗಳನ್ನು ಬಿಸಿಬಿಸಿಯಾಗಿಯೇ ಓದುಗರಿಗೆ ಬಡಿಸುತ್ತಿರುವ ಬಿ.ಎಂ. ಬಶೀರರ, ಪ್ರಸ್ತುತ 123 ಹನಿಗವನಗಳನ್ನೊಳಗೊಂಡ 'ನನ್ನ ಮಸೀದಿಯ ಧ್ವಂಸಗೈದವರಿಗೆ ಕೃತಜ್ಞ..' ಎಂಬ ಈ ಕೃತಿಯ 'ಅರ್ಪಣೆ'ಯನ್ನು ಸ್ವೀಕರಿಸಲಿರುವ ಮೌಲ್ವಿಗಳ ಸಂಕಟವನ್ನು ನೆನಪಿಸಿಕೊಂಡರೆ ಮಾತ್ರ 'ಪೆದಂಬು' ಎಂದರೇನೆಂಬುದು ಸರಿಯಾಗಿ ಅರ್ಥವಾಗಬಹುದೇನೋ.

ಬೆತ್ತ ಹಿಡಿದು ಬಲವಂತದಿಂದ ಮದ್ರಸದಿಂದ ಹೊರದಬ್ಬಲ್ಪಟ್ಟ ಕಾರಣದಿಂದ ಆಸ್ತಿಕನಾಗಿ ಬದಲಾದ ಈ ಕವಿಯ ಕಣ್ಣೀರ ಹನಿಗಳು, ಬಾಗಿಲೇ ಇರಿಸದೆ ಮನೆ ಕಟ್ಟಿದವನೊಬ್ಬ, ಗೋಡೆಗಳ ಕಾರಣದಿಂದ ಹೊರಬರಲಾರದೆ, 'ಒಂದಾದರೂ ಬಾಗಿಲು ಇಡಬೇಕಾಗಿತ್ತು' ಎಂದು ಪರಿತಪಿಸುವವನ ಬಗ್ಗೆ ಕರುಣೆದೋರುತ್ತವೆ. ಕಾಗದದ

ದೋಣಿಯೇರಿ ಬೆಂಕಿಯ ನದಿ ದಾಟಬಯಸುವ ಕವಿಗೆ ಬೀಳುವ ಕನಸಿನ ಸ್ವರ್ಗದಲ್ಲಿ ಧರ್ಮ ಬೋಧಕರಾರೂ ಕಾಣಿಸದಾದಾಗ ಅಚ್ಚರಿಯಾಗುತ್ತದೆ. ಭೂಮಿಯ ಮೇಲೆ ಕಟ್ಟಲಾದ ಮಂದಿರ, ಮಸೀದಿ, ಚರ್ಚುಗಳನ್ನು ಹಾದು ಬರುವ ಗಾಳಿ, ಉಬ್ಬಸ ತರಿಸುತ್ತದೆ. ನಿಜಭಕ್ತ ಮುಖ ಮಾಡಿದತ್ತ 'ಕಾಬಾ' ದಿಕ್ಕು ಬದಲಿಸುತ್ತದೆ ಎಂಬ ಕನಕನಂಬಿಕೆಯ ಕವಿಗೆ, ಅರಮನೆಗೆ ಮುಖಮಾಡಿ ಪ್ರಾರ್ಥನೆ ಸಲ್ಲಿಸುವ ಪುರೋಹಿತರ ಬಗ್ಗೆ ಭಯಂಕರ ಸಿಟ್ಟಿದೆ.

'ಎಸೆಯುವುದೇ ಆದರೆ ಹಂದಿಮಾಂಸ, ಗೋಮಾಂಸಗಳನ್ನು ಮಂದಿರ–ಮಸೀದಿಗಳ ಪ್ರಾಂಗಣಕ್ಕೆಸೆಯದೆ, ಹಸಿದವನ ಮನೆಯ ಅಂಗಳಕ್ಕೆ ಎಸೆಯಿರಿ' ಎಂದು ಪ್ರಾರ್ಥಿಸುವ ಇವರಿಗೆ, ಉಣ್ಣುವುದೂ ಬಡಭಕ್ತನಿಗೆ ಒಂದು ಬಗೆಯ ಪ್ರಾರ್ಥನೆಯೆಂಬ ನಂಬಿಕೆಯಿದೆ.

ನರಕದ ಹೆಬ್ಬಾಗಿಲಲ್ಲಿ ದಾನಿಗಳ ಹೆಸರು ಕೆತ್ತುವ ಬಶೀರರ ಕವನಗಳನ್ನು ಓದುವುದು ತೀರಾ ಸುಲಭ ಮತ್ತು ಬಹಳ ಕಷ್ಟ.

'ಹಸಿದ ನಾಯಿಗೆ ತುತ್ತು ಉಣಿಸಿದಾತನಿಗೆ ನೀನು ಸ್ವರ್ಗವನಿತ್ತೆ' ಎಂಬ ಸುದ್ದಿ ಕೇಳಿದಂದಿನಿಂದ ಹಸಿದವರ ಕಣ್ಣುಗಳಲ್ಲಿ ನನ್ನ ಮಸೀದಿಯನ್ನು ಕಾಣುತ್ತಿದ್ದೇನೆ' ಎನ್ನುವ ಅಪರೂಪದ ಈ ಪದಮಾಂತ್ರಿಕ, ತುಂಬಿದಷ್ಟೂ 'ಬೇಕು' ಎನ್ನುವ ಗೋರಿಗಳ ಹಸಿವು ಇಂಗಿಸಲು ಹೆಣಗುವ ಸೂಲಗಿತ್ತಿಯಂತೆ ಕಾಣಿಸುತ್ತಾರೆ. ಅಭಿನಂದನೆಗಳು.

**–ಬೊಳುವಾರು**

## ಕೃತಜ್ಞ


ಮುನ್ನುಡಿ ಮಾತುಗಳನ್ನು ಬರೆದ
ಬೊಳುವಾರರಿಗೆ,
ವಾರ್ತಾಭಾರತಿ ದಿನ ಪತ್ರಿಕೆ,
ಅಬ್ದುಸ್ಸಲಾಂ ಪುತ್ತಿಗೆ,
ಗೌರಿ ಲಂಕೇಶ್,
ಅವಧಿಯ ಜಿ. ಎನ್. ಮೋಹನ್,
ಸೋದರ ಮುಹಮ್ಮದ್ ಮುಸ್ಲಿಮ್,
ಕಲಾವಿದ ಅರುಣ್‌ಕುಮಾರ್,
ಮುಂಬಯಿ ಗೆಳೆಯ ಸಾ. ದಯಾ,
ಮುದ್ರಣ ತಪ್ಪುಗಳನ್ನು ಹೆಕ್ಕಿ ಕೊಟ್ಟ ಸಹೋದ್ಯೋಗಿ ಮುಹಮ್ಮದ್ ಕುಳಾಯಿ,
ಸತೀಶ್ ಕಲ್ಮಾಡಿ,
ಈ ಇರುವೆಯ ಜೊತೆ ನಿಂತ
ಬಾಲ್ಯದ ಗೆಳೆಯ, ಬಂಧು ಮುಸ್ತಫಾ ಬಾಂಬಿಲ
ಮತ್ತು
ನೆನೆದಷ್ಟೂ ಮುಗಿಯದ ನೂರಾರು ಹೆಸರುಗಳಿಗೆ
ಕೃತಜ್ಞನಾಗಿದ್ದೇನೆ.

– **ಬಿ. ಎಂ. ಬಶೀರ್**

# ಅರ್ಪಣೆ

ನನ್ನನ್ನು ಸಹಿಸಿಕೊಳ್ಳಲಾಗದ ಮೌಲ್ವಿ
ಒಂದು ದಿನ
ಬೆತ್ತ ಹಿಡಿದು ಬಲವಂತವಾಗಿ
ಮದ್ರಸದಿಂದ ಹೊರ ದಬ್ಬಿದರು!
ನನ್ನ ಅಧ್ಯಾತ್ಮದ ಕಲಿಕೆ
ಅಲ್ಲಿಂದಲೇ ಆರಂಭವಾಯಿತು....

ಆ ಮೌಲ್ವಿಗೆ ಈ ಹನಿಗಳನ್ನು
ಕೃತಜ್ಞತಾ ಪೂರ್ವಕವಾಗಿ ಅರ್ಪಿಸುತ್ತಿದ್ದೇನೆ



1

ಧರ್ಮ ಪಂಡಿತರು
ಕಟ್ಟಿ ಕೊಟ್ಟ ಬುತ್ತಿಯನ್ನು,
ಹೇಳಿಕೊಟ್ಟ ಮಾತನ್ನು
ಹೊತ್ತುಕೊಂಡು
ನಿನ್ನೆಡೆಗೆ ಪ್ರಯಾಣ ಹೊರಟೆ
ನನ್ನ ದೊರೆಯೇ...
ಇದೀಗ ಕಟ್ಟಿಕೊಟ್ಟ ಬುತ್ತಿ..
ಹೇಳಿಕೊಟ್ಟ ಮಾತು
ಅರ್ಧ ದಾರಿಯಲ್ಲೇ ಮುಗಿದು ಹೋಗಿದೆ...
ನಿನ್ನ ತಲುಪಲು ದಿಕ್ಕು ತಿಳಿಯದೆ
ತೊಳಲಾಡುತ್ತಿದ್ದೇನೆ....

2

ದೋಚಲು ಬಂದ
ಕಳ್ಳರು ನನ್ನ ನಮಾಝಿನ
ಹರಿದ ಚಾಪೆಯನ್ನು
ನನಗೇ ಉಳಿಸಿ ಹೋದರು !
ಕೇಳಿದ್ದರೆ ಈ ಚಾಪೆಯನ್ನೂ
ಕೊಟ್ಟು ಬಿಡುತ್ತಿದ್ದೆ
ನನ್ನ ದೊರೆಯೇ,
ಈ ಚಾಪೆಯನ್ನು ಹೊತ್ತು
ನನ್ನ ಬೆನ್ನು ಗೂನಾಗಿ ಬಿಟ್ಟಿದೆ

3

ಹಣೆಯ ಮೇಲಿರುವ
ನಮಾಝಿನ ಗುರುತು
ನಿಮ್ಮನ್ನು ನನ್ನ ದೊರೆಯ
ಬಳಿ ಒಯ್ಯಲಾರದು
ಧರ್ಮ ಪುರೋಹಿತರೇ ...
ಅವನು ನಿಮ್ಮ ಎದೆಯ ಬಗೆದು
ಗುರುತನ್ನು ಹುಡುಕುವನು

4

ನನ್ನ ಸಂಕಟಗಳ
ಒಲೆಯಲ್ಲಿ ನನ್ನ ಅನ್ನ
ಬೇಯುತ್ತಿದೆ
ನನ್ನ ದೊರೆಯೇ,
ಎದೆಯ ಮಡಕೆಯಿಂದ
ಹೊಮ್ಮುವ ಪರಿಮಳಕ್ಕೆ
ನಿನ್ನ ಸ್ವರ್ಗದ ಸ್ವಾದವಿದೆ

5

ಹಿಂಬಾಗಿಲು ಮುರಿದಿದೆ,
ಕಿಟಕಿ ಒಡೆದಿದೆ,
ರಾತ್ರಿ ಕಳ್ಳ ಮನೆಗೆ ನುಗ್ಗಿದ್ದಾನೆ
ನನ್ನ ದೊರೆಯೇ,
ಅವನು ಕದ್ದದ್ದೇನು ಎನ್ನೋದೆ
ನನಗೆ ತಿಳಿಯುತ್ತಿಲ್ಲ

6

ಹಸಿದ ನಾಯಿಗೆ
ತುತ್ತು ಉಣಿಸಿದಾತನಿಗೆ
ನೀನು ನಿನ್ನ ಸ್ವರ್ಗವನ್ನಿತ್ತೆ
ಎಂಬ ಸುದ್ದಿ ಕೇಳಿದಂದಿನಿಂದ
ಹಸಿದವರ ಕಣ್ಣುಗಳಲ್ಲಿ ನನ್ನ
ಮಸೀದಿಯನ್ನು ಕಾಣುತ್ತಿದ್ದೇನೆ

7

ನನ್ನ ದೊರೆ ಕೊಟ್ಟ
ಹಾಲಿನಂಥ ಮನಸ್ಸನ್ನು
ಕೆಡಿಸಿಕೊಂಡೆಯೆಂಬ ಚಿಂತೆ ಬಿಟ್ಟೆ
ಕೆಟ್ಟ ಹಾಲನ್ನು ಕಡೆದರೆ
ಅದಕ್ಕೆ ಮೊಸರು, ಬೆಣ್ಣೆ, ತುಪ್ಪ
ಎಂಬ ಹೆಸರಾಯಿತು
ಕೆಡುವ ಭಯ ಬಿಟ್ಟು
ನನ್ನ ನಾನೀಗ ಕಡೆಯುತಿರುವೆ ...

8

ನನ್ನ ಹಣೆಯ ಸ್ಪರ್ಶಕ್ಕೆ
ಚಾಪೆ ಸವೆದು ಹೋಗಿದೆ
ದೊರೆಯೇ...
ಚಾಪೆಯಂತೂ ಸ್ವರ್ಗ ಸೇರಿತು...
ನನ್ನ ಹಣೆಯ
ಒಂದು ಗೆರೆಯೂ ಸವೆದಿಲ್ಲ...
ಸವೆಯದವನಿಗೆ ನಿನ್ನ
ಸ್ವರ್ಗವಿಲ್ಲ...

9

ಎಣಿಸಿದ ರಭಸಕ್ಕೆ
ಜಪಮಾಲೆ ಹರಿದು
ಚೆಲ್ಲಾಪಿಲ್ಲಿಯಾದವು ದೊರೆಯೇ...
ಇದೀಗ ಈ ರಾತ್ರಿ
ನೀನು ಭಿಕ್ಷೆಯಾಗಿ
ನೀಡಿದ ನಾಲ್ಕು ಪದಗಳನ್ನೇ
ಜಪ ಮಣಿಗಳಂತೆ
ಎಣಿಸುತ್ತಿದ್ದೇನೆ

10

ಪಂಡಿತರೆಲ್ಲ ನಿಟ್ಟುಸಿರಿಟ್ಟು
ಹೇಳಿದರು....
ಧರ್ಮವನ್ನು ನಾವೆಲ್ಲ ಸೇರಿ
ಉಳಿಸಬೇಕು...
ಇದೋ ಪಾಳು ಬಿದ್ದ ಧರ್ಮದ
ಬಲೆ ಹರಿದು ಬಂದಿದ್ದೇನೆ
ನೀನೆ ನನ್ನನ್ನು ಉಳಿಸಬೇಕು ದೊರೆಯೇ....

11

ಹೂವಿನ ಎಸಳೊಂದ ಕಿತ್ತು
ಇದರ ಪರಿಮಳ ನೋಡು
ಎಂದು ಅಕ್ಕಸಾಲಿಗನಿಗೆ ಕೊಟ್ಟೆ...
ನನ್ನ ದೊರೆಯೇ....
ಅವನದನ್ನು ಕಲ್ಲಿಗೆ ತಿಕ್ಕಿ
ಮೂಸಿ ನೋಡಿ ಹೇಳಿದ...
ಇದರಲ್ಲಿ ಅಂತಹದೇನು ಇಲ್ಲ....

12

ರೊಟ್ಟಿ ಮಾಡಲು
ಬರೋದಿಲ್ಲ ಎಂದು ಹೇಳುವಂತಿಲ್ಲ...
ನಾವು ಮಾಡಿದ
ರೊಟ್ಟಿಯನ್ನೇ ತಿನ್ನಬೇಕಾದ
ದಿನವೊಂದಿದೆ
ನೆನಪಿಡು

13

ಸಂಜೆ ಸೂರ್ಯನ
ಹೆಣ ತೇಲುತ್ತಿದೆ
ತನ್ನ ಕೆಂಪು ಕೈಗಳಿಂದ
ಕಡಲು ದಡ ಸೇರಿಸಿದ
ಮಗುವಿನ ಕೆನ್ನೆಯ  ಮೇಲೆ
ಧರ್ಮದ ಹೆಸರಿದೆ

14

ಕಾಣದ ದೇವರಿಗೆ
ಬಾಗುವುದಿಲ್ಲವೆಂದ,
ನನ್ನ ದೊರೆಯೇ...
ನಾನೋ ಕಾಣುವ
ಮನುಷ್ಯರಿಗೆ ಬಾಗುವುದಿಲ್ಲ
ಎಂದೇ, ಅಷ್ಟೇ....

15

ಕೈಯಲ್ಲಿ ದಂಡ ಹಿಡಿದು
ಅಮ್ಮ ಸಿಟ್ಟಿನಿಂದ ಅವುಡು ಕಚ್ಚಿ
ನಿಂತಿದ್ದರೆ
ಮಗು ಮಾತ್ರ ಗಲಗಲನೆ ನಗುತ್ತಿದೆ
ಮಗುವಿನ ಧೈರ್ಯವೋ!
ತಾಯಿಯ ಕರುಣೆಯೋ!

16

ನೀನು ಅರ್ಥವಾಗುತ್ತಿಲ್ಲವೆಂದು
ಅವರು ನಿನ್ನನ್ನು ನಂಬುತ್ತಿದ್ದಾರೆ
ನನ್ನ ದೊರೆಯೇ,
ನಿನ್ನೊಬ್ಬನನ್ನು ಬಿಟ್ಟು
ಈ ಜಗದಲ್ಲಿ ನನಗೆ
ಯಾವುದೂ ಅರ್ಥವಾಗುತ್ತಿಲ್ಲ !

17

ಹಸಿವಿನ ಸಂಕಟ ತಡೆಯದೆ
ಹಂದಿ ಮಾಂಸ ತಿಂದೆ
ಈಗ ಹೊಟ್ಟೆ ತುಂಬಿದೆ.
ಹೊಟ್ಟೆಯೊಳಗಿನ ಬೆಂಕಿ
ನಿನ್ನ ನರಕದ ಬೆಂಕಿಯ ಭಯವನ್ನು
ಒಂದು ಕ್ಷಣ ಮರೆಸಿ ಬಿಟ್ಟಿತು
ಕ್ಷಮಿಸು ದೊರೆಯೇ,
ಎರಡೂ ನೀನೇ ಹಚ್ಚಿದ ಬೆಂಕಿ
ಈ ಪಶ್ಚಾತ್ತಾಪವನ್ನು ಸ್ವೀಕರಿಸು

18

ನಮಾಝಿಗೆ ನಿಂತ ನನ್ನನ್ನು
ಕೇಳಿದರು, ಶುದ್ಧಿಯಾಗಿದ್ದೀಯ?
ಇಲ್ಲ ಎಂದೆ...
ಅವರೆಲ್ಲ ನನ್ನ ಹೊರ ದಬ್ಬಿದರು...
ನನ್ನ ದೊರೆಯೇ
ಅವರಿಗೇನು ಗೊತ್ತು?
ನನ್ನ ಅಶುದ್ಧಿ ಏಳು ಕಡಲನ್ನು
ಮುಳುಗಿದರೂ
ಮುಗಿಯಲಾರದ್ದೂ ಎಂದು...
ಶುದ್ಧಿಯಾಗಲೆಂದೇ ನಾನು
ನಿನ್ನ ಮುಂದೆ ನಿಂತಿದ್ದೆ ಎಂದು?

19

ದೇವರನ್ನು ನಂಬೋದು
ಎಂದರೆ ಏನು?
ಅವನು ಕೇಳಿದ...
ನನ್ನನ್ನು ನಾನು ನಂಬೋದು
ಎಂದರೆ ಏನು?

20

ದೇವರನ್ನು
ಹೇಗೆ ಆರಾಧಿಸಬೇಕು?
ಅವನು ಕೇಳಿದ...
ನೀನು ಅವನ ಆರಾಧಿಸುತ್ತಿರುವುದು
ನಿನಗೇ ತಿಳಿಯದಿರಬೇಕು
ಹಾಗೆ...ಎಂದೆ...

21

ಗೋರಿಯ ಮೇಲೆ ಕುಳಿತು
ರೊಟ್ಟಿ ತಿನ್ನುತ್ತಿದ್ದೀಯ ಪಾಪಿ?
ಅವರು ಕೇಳಿದರು...
ನನ್ನ ದೊರೆಯೇ
ಅವರಿಗೇನು ಗೊತ್ತು?
ಗೋರಿಯೊಳಗಿರುವವರೂ
ತಮ್ಮ ತಮ್ಮ ರೊಟ್ಟಿಗಳನ್ನು
ತಿನ್ನುವ ಹೊತ್ತು ಇದೆಂದು?

22

ನಾನೊಬ್ಬ ಜೂಜುಗಾರ
ಕಾಣುವ ದೊರೆಗಳನ್ನು ನಂಬದೆ
ಕಾಣದ ನಿನ್ನ ಮೇಲೆ
ನನ್ನದೆಲ್ಲವನ್ನು ಹೂಡಿದೆ...

23

ಭಕ್ತಿಯೆನ್ನುವುದು
ಜೂಜಿನ ಚಟದಂತೆ
ನನ್ನನ್ನು ಅಂಟಿಕೊಂಡಿದೆ...
ಕಳೆದುಕೊಂಡಷ್ಟು
ಇನ್ನಷ್ಟು ಕಳೆದು ಕೊಳ್ಳಲು
ಮನಸ್ಸು ಚಡಪಡಿಸುತ್ತಿದೆ...

24

ಕಳೆದು ಕೊಳ್ಳುವವರೆಗೆ
ಕಳೆದು ಕೊಳ್ಳುವ
ಸುಖ ನನಗೆ
ಗೊತ್ತಿರಲಿಲ್ಲ



25

ಒಬ್ಬ ಜೂಜುಗಾರ
ಯಾರನ್ನು ನಂಬಿ
ತನ್ನದನ್ನೆಲ್ಲ ಒತ್ತೆ ಇಟ್ಟು ಆಡಿದ...?
ಕನಿಷ್ಠ
ಆ ಜೂಜುಗಾರನಿಗಿರುವ
ನಿಯತ್ತಾದರೂ ನನ್ನದಾಗಲಿ
ನನ್ನ ಬದುಕಿನ ಕಟ್ಟ ಕಡೆಯ
ಕವಡೆಯನ್ನೂ
ಇಟ್ಟು ಆಡುವ ಭಕ್ತಿ ನನ್ನದಾಗಲಿ...

26

ಭಕ್ತಿ ಎಂದರೆ
ಜೂಜು ಎನ್ನೋದು
ಗೊತ್ತಿರಲಿಲ್ಲ ದೊರೆಯೇ..
ಪಡೆದುಕೊಳ್ಳುತ್ತ
ಕಳೆದು ಕೊಳ್ಳುವ ಖುಷಿಗೆ
ನನ್ನನ್ನು ಇಗೋ
ತೆತ್ತು ಬಿಟ್ಟಿದ್ದೇನೆ...
ಪಣಕ್ಕಿಡಲು ಇನ್ನೇನು ಇಲ್ಲ
ಎನ್ನುವವರೆಗೂ ಆಡುವ ಖುಷಿಯನ್ನು
ನನಗೆ ಭಿಕ್ಷೆಯಾಗಿ ಕೊಡು

27

ಮಸೀದಿಯಲ್ಲಿ ನಮಾಝಿಗೆಂದು
ಸಾಲಾಗಿ ನಿಂತ ಧರ್ಮ ಪಂಡಿತರು
ಉರು ಹೊಡೆದ ಶ್ಲೋಕಗಳನ್ನು
ಪಟ ಪಟನೆ ಉದುರಿಸುತ್ತಿದ್ದಾರೆ,
ನಾನೋ, ಪದಗಳು ಸಿಕ್ಕದೆ
ಕಂಗಾಲಾಗಿದ್ದೇನೆ ನನ್ನ ದೊರೆಯೇ,
ನನಗೆ ನಿನ್ನನ್ನು ಆರಾಧಿಸಬೇಕಾಗಿದೆ
ಕೈಯೊಡ್ಡಿ ಬೇಡುವೆ
ನಾಲ್ಕು ಪದಗಳನ್ನು ಭಿಕ್ಷೆಯಾಗಿ ನೀಡು

28

ಧರ್ಮ ಪಂಡಿತನೊಬ್ಬ
ತನ್ನ ತೋರು ಬೆರಳನ್ನು ಹಿರಿದು
ನನ್ನ ಹಣೆಗೆ ಚುಚ್ಚಿ ಹೇಳಿದ,
ನೀನೊಬ್ಬ ಧರ್ಮ ವಿರೋಧಿ...
ನನ್ನ ದೊರೆಯೇ
ಅವನ ಉಳಿದ ಮೂರು ಬೆರಳುಗಳು
ಅವನ ಎದೆಯ ಕಡೆಗೆ
ಚಾಚಿರುವುದನ್ನು ಅವನು ಕಂಡಿರಲಿಲ್ಲ...

29

ಅಮೃತ ಶಿಲೆಗಳಿಂದ
ಕಟ್ಟಲ್ಪಟ್ಟ ಆ ಭವ್ಯ ಮಸೀದಿಯ
ಮೀನಾರ ಆಕಾಶವನ್ನು ಚುಚ್ಚುತ್ತಿತ್ತು...
ನನ್ನ ದೊರೆಯೇ...
ನಿನ್ನ ಹುಡುಕುತ್ತ
ಆ ಮಿನಾರದ ತುತ್ತ ತುದಿಯನ್ನು ಏರಿದರೆ
ಮಿನಾರದ ಬುಡದಲ್ಲಿ
ತಲೆಗೆ ಸೂರಿಲ್ಲದೆ ಬಿಸಿಲಲ್ಲಿ ಒಣಗುತ್ತಿರುವ,
ಮಳೆಯಲ್ಲಿ ನೆನೆಯುತ್ತಿರುವ
ಲಕ್ಷಾಂತರ ಭಿಕಾರಿಗಳ ಕಂಡೆ...

30

ಮಸೀದಿಯ ಅಮೃತ ಶಿಲೆಯ
ನೆಲದ ಹಾಸು ಕನ್ನಡಿಯಂತೆ
ಹೊಳೆಯುತ್ತಿತ್ತು...
ನನ್ನ ದೊರೆಯೇ,
ನಿನಗೆಂದು ಬಾಗಿದವರು
ಆ ಕನ್ನಡಿಯಲ್ಲಿ
ತಮ್ಮ ಮುಖವನ್ನೇ ನೋಡಿ ಸುಖಿಸುತ್ತಿದ್ದಾರೆ...

31

ನಾನು ಮಾಡಿದೆ ಎಂದವನು
ಏನನ್ನು ಮಾಡಲಿಲ್ಲ
ನನ್ನ ದೊರೆಯೇ,
ನಾನು ಮಾಡಲಿಲ್ಲ ಎಂದವನು
ಎಲ್ಲವನ್ನೂ ಮಾಡಿದ...

32

ಧರ್ಮ ಪಂಡಿತರು
ನಿನ್ನ ಆರಾಧನೆಗೆಂದು
ನಮಾಝಿಗೆ ನಿಂತರು
ಇದೀಗ ನಿನ್ನನ್ನು ಮರೆತು
ನಮಾಝನ್ನೆ ಆರಾಧಿಸ ತೊಡಗಿದ್ದಾರೆ
ನನ್ನ ದೊರೆಯೇ,
ಹಣ್ಣು ಕೊಯ್ಯಲೆಂದು
ಮರಕ್ಕೆ ಏಣಿ ಇಟ್ಟವರು
ಹಣ್ಣನ್ನು ಮರೆತು
ಏಣಿಯನ್ನೇ ತಬ್ಬಿಕೊಂಡಿದ್ದಾರೆ...!

33
ಧರ್ಮ ಪಂಡಿತರು
ನಿನ್ನ ನೆನೆದು
ಭಯ ಪೀಡಿತರಾಗಿದ್ದಾರೆ
ನನ್ನ ದೊರೆಯೇ...
ನಾನೋ ಅಜ್ಞಾನಿ,
ನೀನೋಬ್ಬನಿದ್ದೀಯೆಂದು
ನಿರ್ಭಯನಾಗಿದ್ದೇನೆ...

34
ಸೈತಾನನಿಗೆಂದು ಎಸೆದ ಕಲ್ಲು
ಅವನ ಬೆರಳ ಉಗುರನ್ನೂ ನೋಯಿಸಲಿಲ್ಲ...
ಕಳ್ಳ ನಮ್ಮ ಮನೆಯ
ಅಡುಗೆ ಕೋಣೆಯಲ್ಲಿ
ಬಚ್ಚಿಟ್ಟು ಕೊಂಡಿದ್ದಾನೆ
ನಾವೋ ಮನೆಯಂಗಳದಲ್ಲಿ
ಅವನನ್ನು ಹುಡುಕುತ್ತಿದ್ದೇವೆ...

35

ಧರ್ಮ ಪುರೋಹಿತರ
ಮೇಲಿನ ನಂಬಿಕೆ
ಕಳೆದು ಕೊಂಡ ದಿನ
ನಿನ್ನ ಮೇಲಿನ ನಂಬಿಕೆ
ದುಪ್ಪಟ್ಟಾಯಿತು
ನನ್ನ ದೊರೆಯೇ

36

ರಮಝಾನ್ ಹತ್ತಿರವಾಗಿದೆ
ನನಗೋ ಭಯವಾಗುತ್ತಿದೆ
ನನ್ನ ಉಪವಾಸ
ಬಡವರ ಹಸಿವಿನ
ಅಣಕವಾಗದಿರಲಿ ದೊರೆಯೇ

37

ಭವ್ಯ ಮಸೀದಿಯ ಹೊಳೆವ
ನೆಲದಲ್ಲಿ ಅವನು ಜಪಮಣಿ
ತಿರುಗಿಸುತ್ತಿದ್ದ...

ಮೀನು ಮಾರುವ ಅಬ್ಬು ಕಾಕ
ನನ್ನ ದೊರೆಯ ಜಪಿಸುತ್ತ
ಹಳೆಯ ಸೈಕಲನ್ನು
ಸುಡು ಬಿಸಿಲಲ್ಲಿ ತಿರುಗಿಸುತ್ತಿದ್ದ

ಅದೋ ನೋಡಿ...
ಮಸೀದಿಯಾ ಹೊಳೆವ ನೆಲದಲ್ಲಿ
ಆತನ ಜಪ ಮಣಿ ಸರ ಹರಿದು
ಚೆಲ್ಲಾಪಿಲ್ಲಿಯಾಗಿವೆ...

ಅಬ್ಬೊ ಕಾಕನ
ಜೊತೆಗೆ ಆತನ ಹಳೆಯ ಸೈಕಲು
ನನ್ನ ದೊರೆಯ ಸ್ವರ್ಗದಲ್ಲಿ
ಅತ್ಯುನ್ನತ ಸ್ಥಾನ ಪಡೆದಿದೆ....

38

ವಿದ್ಯುತ್ ಕೈ ಕೊಟ್ಟಿತ್ತು
ಮುಂಜಾನೆಯ ಅಝಾನ್ ಕರೆ
ಮಸೀದಿಯ ನಾಲ್ಕು ಗೋಡೆಯನ್ನು
ದಾಟಲಿಲ್ಲ....
ಹಕ್ಕಿಗಳ ಚಿಲಿಪಿಲಿ ಕರೆ
ನನ್ನನ್ನು ತಟ್ಟಿ ಎಬ್ಬಿಸಿತು

ಎಂದೂ ಇಲ್ಲದ
ಉತ್ಸಾಹದಿಂದ ಅಂದು
ನನ್ನ ದೊರೆಗೆ ಬಾಗಿದೆ!

39

ನನ್ನ ಮುಂದಿದ್ದ ಕಲ್ಲು ವಿಗ್ರಹಗಳನ್ನು
ಎಂದೋ ಮುರಿದು ಮುಂದೆ ಬಂದಿದ್ದೇನೆ
ಆದರೆ ಇದೀಗ...
ಏಕದೇವನ ಮುಂದೆ
ಪಾಲುದಾರಿಕೆಯನ್ನು ಬೇಡುತ್ತಿರುವ
ಶಬ್ದ, ಅಕ್ಷರಗಳ ವಿಗ್ರಹಗಳನ್ನು
ಮುರಿದು ಮುಂದೆ ಹೋಗಬೇಕಾಗಿದೆ
ಅದು ನನ್ನಿಂದ ಸಾಧ್ಯವಿದೆಯೆ?

40

ನಮಾಝಿಗೆ ಮುನ್ನ ಶುದ್ಧಿಯಾಗಲೆಂದು
ಮಸೀದಿಯ ಕೊಳದೆಡೆಗೆ
ನಡೆದೆ...
ಕೊಳದ ನೀರು ನನ್ನ
ನಮಾಝಿನ ಚಾಪೆಯ
ಕೊಳೆಯನ್ನು ಕಳೆಯಲೂ
ಸಾಕಾಗಲಿಲ್ಲ ದೊರೆಯೇ

ಇನ್ನು ನನ್ನ ಅಶುದ್ಧಿಯನ್ನು
ಯಾವ ಕೊಳದಲ್ಲಿ ತೊಳೆಯಲಿ?
ನಿನ್ನ ನರಕದ ಬೆಂಕಿ ಮಾತ್ರ
ನನ್ನ ಕೊಳೆಯನ್ನು ಸುಟ್ಟು
ನನ್ನನ್ನು ಶುದ್ಧಿಯಾಗಿಸೀತು....

41

ಪಂಡಿತರು ಹೇಳಿದರು
ನಮಾಝಿಗೆ ನಿಂತ ನಿನ್ನ ಮುಖದ
ದಿಕ್ಕು ಕಅಬಾದೆಡೆಗಿರಲಿ!
ಪಂಡಿತರಿಗೆ ಗೊತ್ತಿರಲಿಲ್ಲ ದೊರೆಯೇ....
ನಿಜವಾದ ಭಕ್ತನೊಬ್ಬ
ಮುಖ ಮಾಡಿದೆಡೆಗೆ
ಕಾಬಾ ತನ್ನ ದಿಕ್ಕನ್ನು
ಬದಲಿಸುವುದು...

42


ನೀನು ನೂರಾರು ಪುಸ್ತಕಗಳನ್ನು
ಓದಿದ, ಕುರಾನ್ ಕಂಠ ಪಾಠ
ಮಾಡಿದ ಮಹಾ ಪಂಡಿತ...
ನಾನು ಬಲ್ಲೆ
ಚರ್ಚೆಯಲ್ಲಿ ಬೇರೆ ಬೇರೆ
ಧರ್ಮಗಳ ನೇತಾರರನ್ನು
ಕ್ಷಣ ಮಾತ್ರದಲ್ಲಿ ಸೋಲಿಸಿದೆನ್ನುವುದು
ನಿನ್ನ ಹೆಗ್ಗಳಿಕೆ...

ಆದರೆ ನನ್ನ ದೊರೆಯನ್ನು ನೀನೇನು ಬಲ್ಲೆ?
ಪಂಡಿತರಲ್ಲಿ ಮಹಾ ಪಂಡಿತ ಆತ
ಹೇಳು, ನಿನ್ನ ಪಾಂಡಿತ್ಯದಿಂದ
ಆ ದೊರೆಯ ಸೋಲಿಸುವ ಧೈರ್ಯವಿದೆಯೆ?

ಒಂದಕ್ಷರ ಕಲಿಯದ
ಮಂತ್ರದ ಒಂದು ಸಾಲೂ ತಿಳಿಯದ
ಮೀನು ಮಾರಿ ಹೊಟ್ಟೆ ಹೊರೆವ
ಅಬ್ಬೂ ಕಾಕನ ಭಕ್ತಿಗೆ
ನನ್ನ ದೊರೆ
ಕ್ಷಣ ಮಾತ್ರದಲ್ಲಿ ಸೋತ....!!

43
ನಿನ್ನೆ ರಾತ್ರಿ
ನನಗೆ ನಿನ್ನ
ಸ್ವರ್ಗದ ಕನಸು ಬಿತ್ತು ದೊರೆಯೇ,
ಅಲ್ಲಿ ಧರ್ಮ ಬೋಧಿಸಿದ
ಪುರೋಹಿತರೊಬ್ಬರೂ ಕಾಣ ಸಿಗಲಿಲ್ಲ!

44
ತನ್ನ ಮಗುವಿನ ಮನಸು, ಕನಸುಗಳಿಗೆ
ಸ್ಪಂದಿಸದ ತಾಯಿ
ಊರಿಡೀ ಪಾಯಸ ಹಂಚಿದರೇನು ?
ಅದರಲ್ಲಿ ಉಪ್ಪೇ ಇರಲಿಲ್ಲ !



45

ಮನೆಯೊಳಗೆ
ಮೆದು ಮಾತನಾಡಲು ಅರಿಯದವ
ಬೀದಿಯಲ್ಲಿ ಕಂಡವರೆದುರು
ಸಿಹಿ ಮಾತುಗಳನ್ನಾಡುತ್ತಿದ್ದರೆ
ಅವುಗಳ ನಂಬುವುದು ಹೇಗೆ?

46

ಕದ್ದ ಹಣ್ಣನ್ನು
ಅದು ಹೇಗೋ ಮುಚ್ಚಿಟ್ಟು ತಿಂದೆ
ಆದರೆ ಹರಡಿರುವ
ಹಣ್ಣಿನ ಪರಿಮಳ
ಕಳ್ಳನ ಹೆಸರನ್ನು ಕೂಗಿ ಕೂಗಿ
ಹೇಳುತ್ತಿದೆ

47

ವಿದ್ವಾಂಸನ ಪಾಂಡಿತ್ಯದ
ಪ್ರಶ್ನೆಗೆ  ನನ್ನ ದೊರೆ
ಇನ್ನಷ್ಟು ಜಟಿಲನಾದ
ಮಗುವಿನ ಮುಗ್ಧ ಪ್ರಶ್ನೆಗೆ
ನನ್ನ ದೊರೆ
ಅಂಬೆಗಾಲಿಟ್ಟ ಮಗುವಿನಂತೆ
ಸರಳವಾದ

48

ನನ್ನ ದೊರೆಯೇ,
ಕಣ್ಣೀರ ಉಪ್ಪು
ತುಟಿಯನ್ನು ಸೋಕಿತು
ಪ್ರಾರ್ಥನೆಗೂ
ಒಂದು ರುಚಿಯಿದೆ
ಎನ್ನೋದು ತಿಳಿಯಿತು

49

ಪಂಡಿತರ ಮಂತ್ರಗಳ
ಸದ್ದುಗಳ ನಡುವೆ
ನನ್ನ ಕಣ್ಣೀರ ಹನಿಯೊಂದು
ನೆಲಕ್ಕೆ ಬಿದ್ದು ಒಡೆದ ಸದ್ದು
ನಿನಗೆ ಕೇಳಿಸಲಿಲ್ಲವೇ ?

50

"ಹೋ ಪ್ರಾರ್ಥನೆಯ ಹೊತ್ತಾಯಿತು"
ಯಾರೋ ಚೀರಿದರು
ನನ್ನ ದೊರೆಯೇ,
ಇದು ನನ್ನ ಉಣ್ಣುವ ಹೊತ್ತು
ನಿಜ ಭಕ್ತನಿಗೆ
ಉಣ್ಣುವುದೂ ಪ್ರಾರ್ಥನೆಯೇ

51
ಮಸೀದಿಯಲ್ಲಿ
ಅಝಾನ್ ಕೇಳುತ್ತಿದೆ
ನನ್ನ ದೊರೆಯೇ,
ಮಹಮ್ಮದರ ಹೆಗಲಿಗೆ
ಕಾಲಿಟ್ಟು
ಕಅಬಾದ ನೆತ್ತಿಯನ್ನು ಏರಿದ
ಬಿಲಾಲ್ ನೆನಪಾದರು

52
ಅರಮನೆಯ ಹಂಗು
ಬೇಡವೆಂದು
ಮಸೀದಿಯೆಡೆಗೆ ನಡೆದೆ,
ಆದರೆ ಮಸೀದಿಯ ಪುರೋಹಿತನೋ
ಅರಮನೆಗೆ ಮುಖ ಮಾಡಿ
ಪ್ರಾರ್ಥನೆ ಸಲ್ಲಿಸುತ್ತಿದ್ದ!

53
ಅರಮನೆಯಂತಹ ಮಸೀದಿ!
ಅಮೃತ ಶಿಲೆಯಲ್ಲಿ
ದಾನಿಗಳ ಹೆಸರು ಕೆತ್ತಿದ್ದಾರೆ!
ರಾತ್ರಿ ನನಗೆ ನರಕದ ಕನಸು ಬಿತ್ತು
ನನ್ನ ದೊರೆಯೇ,
ನರಕದ ಬಾಗಿಲಲ್ಲಿ
ಆ ದಾನಿಗಳ ಹೆಸರೂ ಕೆತ್ತಲ್ಪಟ್ಟಿತ್ತು

54
ಅರಮನೆಯಂತಹ
ಮಸೀದಿಗಳ
ಬುಡ ದುರ್ಬಲವಾಗಿರುತ್ತದೆ
ನನ್ನ ದೊರೆಯೇ,
ಯಾವ ದಾನಿಗಳ
ಹಂಗೂ ಇಲ್ಲದ ಬಯಲಲ್ಲಿ
ನಿರ್ಭಯನಾಗಿ ನಿನಗೆ ಬಾಗಿದೆ

55
ಮಸೀದಿಯನ್ನು
ಅಮೃತ ಶಿಲೆಯಲ್ಲಿ
ಬಗೆ ಬಗೆಯಾಗಿ ಅಲಂಕರಿಸಲಾಗಿದೆ
ಇವರು ನನ್ನ ದೊರೆಯ ಮರೆತು
ಮಸೀದಿಯನ್ನೇ ಆರಾಧಿಸತೊಡಗಿದ್ದಾರೆ!

56
ನಮಾಝಿಗೆಂದು
ಬಂದವನು ಮಸೀದಿಯ
ವೈಭವಕ್ಕೆ ದಂಗಾಗಿದ್ದಾನೆ!
ನನ್ನ ದೊರೆಯೇ,
ನಾನೋ ಮಸೀದಿಯ ಹೊರಗಿದ್ದೇನೆ
ನಿನ್ನ ವೈಭವಕ್ಕೆ ದಂಗಾಗಿದ್ದೇನೆ!

57

ಪ್ರಾರ್ಥನೆ ಎಂದರೇನು?
ಕಣ್ತೆರೆದು ನೋಡೋದು
ಕಿವಿತೆರೆದು ಕೇಳೋದು
ನನ್ನ ದೊರೆಯೇ...
ನಿನ್ನ ಅನುಭವದಿಂದ
ರೋಮಾಂಚನಗೊಳ್ಳುವುದು...!

58

ಹರಿಯುತ್ತಿರುವುದು ಬೆಂಕಿಯ ನದಿ
ನಾನೋ ಕಾಗದದ
ದೋಣಿಯನ್ನೇರಿದ್ದೇನೆ
ನನ್ನ ದೊರೆಯೇ,
ತೀರ ತಲುಪುವ ಕನಸು
ಕಾಣುತ್ತಿದ್ದೇನೆ

59


ಪಂಡಿತನೋ ಚಹಾದ
ಮಹತ್ವವನ್ನು ಉರು ಹೊಡೆಸಿ
ಪಠಿಸಲು ಆದೇಶಿಸಿದ್ದಾನೆ
ನನ್ನ ದೊರೆಯೇ,
ನಾನೋ ಚಹಾ ಮಾಡುವುದನ್ನು
ಕಲಿಸಿದೆ ಅಷ್ಟೇ,
ಒಂದು ಗುಟುಕು ಚಹಾದ ರುಚಿಯಲ್ಲಿ
ನಿನ್ನನ್ನು ಕಂಡಿದ್ದೇನೆ

60

ದೇಹದ ದಾಹವೇ
ಇನ್ನೂ ತೀರಿಲ್ಲ
ನನ್ನ ದೊರೆಯೇ,
ಹೀಗಿರುವಾಗ
ಮಗುವಿನಂತೆ ರಚ್ಚೆ ಹಿಡಿಯುತ್ತಿರುವ
ಆತ್ಮದ ದಾಹವನ್ನು
ಹೇಗೆ ಉಣಿಸಿ ತಣಿಸಲಿ!

61

ನನ್ನ ಮಸೀದಿ
ಹಸಿರು ತುಂಬಿದ ಗದ್ದೆ !
ನಾಟಿ ಮಾಡಲು
ಬಾಗಿರುವ ಮಹಿಳೆಯರು
ನನ್ನ ನಮಾಝಿಗೆ ಸ್ಫೂರ್ತಿ
ಎಂದೆ ನನ್ನ ದೊರೆಯೇ,
ಅವರು ನಕ್ಕರು!
ನಕ್ಕು ಸುಸ್ತಾದ ಬಳಿಕ
ಉಣ್ಣುವುದಕ್ಕೆಂದು ಎದ್ದರು!
ಕಲಸಿದ ಅನ್ನದ ತುತ್ತನ್ನು
ಬಾಗದೆ ಉಣ್ಣೂದಕ್ಕೆ ಸಾಧ್ಯವೇ?



62

ನಮಾಝಿಗೆಂದು ಬಾಗಿದ
ನನ್ನನ್ನು ದರವೇಶಿಯೊಬ್ಬನ ಹಾಡು
ತಟ್ಟಿ ಎಚ್ಚರಿಸಿತು!
ನದಿಯಂತೆ ಹರಿದ
ಆ ನಾದಕ್ಕೆ
ನಾನು ಉದುರಿಸಿದ
ಶ್ಲೋಕಗಳು ಕೊಚ್ಚಿ ಹೋಗುತ್ತಿವೆ
ನನ್ನ ದೊರೆಯೇ,
ಹುಚ್ಚ ದರವೇಶಿ ನಗುತ್ತಾ ಹಾಡುತ್ತಿದ್ದಾನೆ
"ನಾದದ ಲಯಕ್ಕೆ
ಅಕ್ಷರಗಳಿಂದ ಕೆತ್ತಿದ ಮಂತ್ರಗಳು
ಲಯವಾಗಲಿ
ಈ ಮಿನಾರಗಳು
ವಿದ್ವಾಂಸರ ಗ್ರಂಥಗಳು
ಕುತುಬಾ ಓದುವವನ ಕೈಯ ಕತ್ತಿ
ಎಲ್ಲವೂ ವೇಷ ಮರೆಸಿರುವ
ವಿಗ್ರಹಗಳು ಗೆಳೆಯ!
ಅವು ಲಯವಾಗೋದನ್ನು ನೋಡುತ್ತಾ
ನೆನೆ ನಿನ್ನ ದೊರೆಯ"

63

ನೆಂಟನ ಮನೆಗೆ ಹೋದೆ
ಅವನ ಅತಿಥ್ಯಕ್ಕೆ
ಬೆರಗಾಗಿ
ನನ್ನ ಮನೆಯೆಂದೇ ತಿಳಿದೆ
ದಿನ ಪೂರ್ತಿ ಅಲ್ಲೇ ಉಳಿದೆ
ಇಂದು ನೋಡಿದರೆ
ಸೊಟ್ಟ ಮುಖ ಮಾಡಿ
ಕೇಳುತ್ತಿದ್ದಾನೆ,
ಮನೆಗೆ ಯಾವಾಗ
ಹೊರಡುತ್ತೀರಿ?

64

ನಡು ರಸ್ತೆಯಲ್ಲಿ ನಿಂತು
ನಿನ್ನ ನಿಂದಿಸುತ್ತಿದ್ದಾನೆ
ನಿನ್ನ ಆರಾಧಿಸೋದಕ್ಕೆ
ಅದೆಷ್ಟು ದಾರಿಗಳು !

65

ನಿನ್ನ ಹೆಸರನ್ನು ಹುಡುಕುವುದೆಂದರೆ...
ನನ್ನ ಹೆಸರನ್ನು
ಕಳೆದುಕೊಳ್ಳುತ್ತಾ ಹೋಗೋದು...

66

ಸತ್ತ ಬಳಿಕ ನೀನು ನನ್ನ
ಎಬ್ಬಿಸೋದು ಹೇಗೂ ಇದೆ
ಬದುಕಿರುವ ಈ ನನ್ನನ್ನು
ಒಮ್ಮೆ ಎಬ್ಬಿಸಿ ಬಿಡು ದೊರೆಯೇ...

67

ದಾಹವೆಂದು
ಬೊಗಸೆ ತುಂಬಾ
ಮೊಗೆದ ನೀರಲ್ಲಿ
ನನ್ನ ದೊರೆಯ
ಬಣ್ಣ, ರುಚಿ,
ಆಕಾರವನ್ನು ಕಂಡೆ!

68
ಕುಡಿದು ಮಸೀದಿಗೆ
ಬಂದನೆಂದು ಅವರು
ಹೊಡೆದು ಕೊಂದರು

ಅವನು ಮದ್ಯ ಕುಡಿದಿದ್ದ
ಇವರೋ ಧರ್ಮವನ್ನು ಕುಡಿದಿದ್ದರು
ಯಾವುದು ಹೆಚ್ಚು ಅಪಾಯ
ಎನ್ನೋದು ಸಾಬೀತಾಯಿತು
ನನ್ನ ದೊರೆಯೇ

69
ನಿನ್ನ ಕರುಣೆಯ
ಮೇಲೆ ನನಗೆಷ್ಟು
ನಂಬಿಕೆಯೆಂದರೆ,
ನಿನ್ನ ಸ್ವರ್ಗವನ್ನಷ್ಟೇ ನಂಬುವೆ.
ನರಕವನ್ನು ನಂಬಲಾರೆ!

70
ನನ್ನ ಪಾಲಿಗೆ
ಪ್ರಾರ್ಥನೆಯೆಂದರೆ
ಬೇಡೋದಲ್ಲ ದೊರೆಯೇ,
ನೀನು ಕೊಟ್ಟದ್ದನ್ನು
ನೆನೆಯೋದು

71

ನನಗೇನು
ಕೊಟ್ಟೆ ಎಂದು ಕೇಳೋದಿಲ್ಲ
ದೊರೆಯೇ,
ಸಣ್ಣದಾದರೂ ಸರಿ
ನಿನ್ನ ಈ ಆಟದಲ್ಲಿ
ನನಗೊಂದು ಪಾತ್ರ ಕೊಟ್ಟೆ
ನೀನು ಮೆಚ್ಚುವಂತೆ
ನಟಿಸೂದಷ್ಟೇ ನನ್ನ ಗುರಿ

72

ಅನಂತದಲ್ಲಿ ನೀನು
ತೇಲಿ ಬಿಟ್ಟ ಹಡಗು
ಈ ಭೂಮಿ
ಕಣದಲ್ಲಿ ಕಣವಾಗಿದ್ದ
ನನ್ನನ್ನು ಗುರುತಿಸಿ
ಹತ್ತಿಸಿಕೊಂಡೆಯಲ್ಲ
ಶರಣು

73

ಕಣ್ಣಿಗೆ ಗೋಚರವಿಲ್ಲದ
ಕಾರಣಕ್ಕೆ
ನನ್ನ ದೊರೆಯ ಮುಂದೆ
ಕೈ ಚಾಚಲು ಹಿಂಜರಿದಾತ,
ಕಾಣುತ್ತಿದ್ದಾನೆಂಬ
ಒಂದೇ ನಂಬಿಕೆಯಿಂದ
ಮನುಷ್ಯನ ಮುಂದೆ
ಕೈ ಚಾಚಲು ಹೋಗಿ
ಅವಮಾನಿತನಾಗುತ್ತಾನೆ

74

ಮನುಷ್ಯನ
ಬಣ್ಣಿಸಿ ಎಂಜಲಾದ
ಶಬ್ದಗಳಿಂದ ನನ್ನ
ದೊರೆಯ ಹೇಗೆ ಕರೆಯಲಿ ?

75

ಪುಟ್ಟ ಇರುವೆಗೆ
ದೊಡ್ಡ ಕಷ್ಟ ಕೊಡಲಾರ
ನನ್ನ ದೊರೆ,
ಕೊಟ್ಟರೂ ಅದರ
ಕಣ್ಣ ಹನಿಯಷ್ಟೇ
ಸಣ್ಣದಿದ್ದೀತು

76
ಕಾಡಲ್ಲಿ ಗೆಣಸು ಅಗೆಯುತ್ತಿದ್ದಾಗ
ಬಡವನಿರಲಿಲ್ಲ ದೊರೆಯೇ!
ಮನುಷ್ಯ ಚಿನ್ನ ಅಗೆದ ದಿನ
ಬಡವ ಹುಟ್ಟಿದ!

77
ಸ್ವರ್ಗದ ಆಸೆ,
ನರಕದ ಭಯ
ತೊರೆದ ದಿನ
ನನ್ನ ದೊರೆ ಒಲಿದ

78
ಒಂದು ಹಣ್ಣಿನ ಬೀಜದೊಳಗೆ
ನೂರಾರು ಕಾಡುಗಳ
ಬಚ್ಚಿಟ್ಟಿರುವಾತ ನನ್ನ ದೊರೆ
ವೀರ್ಯದ ಒಂದು ಕಣದೊಳಗೆ
ಲೆಕ್ಕವಿರದಷ್ಟು ಜನಾಂಗಗಳನ್ನು
ಬಿಡಿಸಿಟ್ಟಿರುವಾತ ನನ್ನ ದೊರೆ
ಕಣ್ಣಿಗೆ ನಿಲುಕದ ಅಣುವಿನೊಳಗಿಂದ
ಕೋಟ್ಯಂತರ ಸೂರ್ಯ,
ಚಂದ್ರ, ಗ್ರಹ, ನಕ್ಷತ್ರಗಳ
ಹೊರತೆಗೆದಾತ ನನ್ನ ದೊರೆ

79

ರಮಝಾನ್ ಮುಗಿದಿದೆ
ದೇಹದ ತೂಕ ಇಳಿದಿಲ್ಲ ದೊರೆಯೇ
ಹೆಗಲು ಹತ್ತಿ ಕೂತ
ಪಾಪದ ಹೊರೆಯ
ಇಳಿಸೋದೆಂದರೆ ಸುಲಭವಿಲ್ಲ

80

ದುರಹಂಕಾರ
ದುಷ್ಟತನಗಳಿಂದ
ನನ್ನ ಭಿಕ್ಷಾ ಪಾತ್ರೆ ಕೊಳಕಾಗಿದೆ
ನಾನೋ ನನ್ನ ದೊರೆ
ಬೇಡಿದ್ದನ್ನು ಕೊಟ್ಟಿಲ್ಲ ಎಂದು
ಕಂಡ ಕಂಡವರೊಂದಿಗೆ
ದೂರುತ್ತಿದ್ದೇನೆ


81

ನನ್ನ ಕಿರುಬೆರಳ ಹಿಡಿದು
ಜಗ್ಗುತ್ತಿರುವ ಪುಟ್ಟ ಇರುವೆಯೇ
ತಡೆ ತಡೆ, ಬಂದೆ !

ಈ ನನ್ನ ದೊಡ್ಡ ಮೆದುಳು, ಸಣ್ಣ ಹೃದಯ
ದೊರೆಯ ಎಡೆಗಿನ ದಾರಿಗೆ ಅಡ್ಡಿಯಾಗಿದೆ
ಮುನ್ನಡೆಸು ನನ್ನ

ಪುಟ್ಟ ಕಣ್ಣಿನ ನನ್ನ ಪುಟಾಣಿ ಇರುವೆಯೇ
ನೀನು ನನ್ನ ಧಾರ್ಮಿಕ ಗುರು
ನನ್ನ ದೊರೆ ನನಗಾಗಿಯೇ
ಆಕಾಶದಿಂದ ಇಳಿಸಿದ ಸಂತ ನೀನು

ನಿನ್ನ ಸೂಜಿಯ ಮೊನೆಗಿಂತಲೂ
ಸಣ್ಣದಾದ ಮೆದುಳು ಮತ್ತು
ಎಲ್ಲ ಅಗಲಗಳನ್ನು ಮೀರಿದ ಹೃದಯ ಮಾತ್ರ
ನನ್ನನ್ನು ನನ್ನ ದೊರೆಯೆಡೆಗೆ ತಲುಪಿಸೀತು



82

ಪ್ರಶ್ನಿಸಿ
ಮದ್ರಸದಿಂದ ಹೊರಬಿದ್ದೆ
ಇಲ್ಲವಾಗಿದ್ದಿದ್ದರೆ
ನಾನಿಂದು ಬಹು ದೊಡ್ಡ
ನಾಸ್ತಿಕನಾಗಿ ಬಿಡುತ್ತಿದ್ದೆ

83

ಹೊರಟಾಗ ಈ ಗಾಳಿ
ಎಷ್ಟು ಶುದ್ಧವಾಗಿತ್ತು
ಮಸೀದಿ, ಮಂದಿರ, ಚರ್ಚುಗಳನ್ನು
ಹಾದು ಬಂದಿರಬೇಕು
ಉಸಿರಾಟ ಕಷ್ಟವಾಗುತ್ತಿದೆ

84

ಯಾವ ಒಲೆಯಿಂದ
ಚದುರಿದ ಕಿಡಿಗಳು
ಈ ರಾತ್ರಿಯ ನಕ್ಷತ್ರ ಪುಂಜ?
ಯಾವ ತಟ್ಟೆಯಿಂದ
ಜಾರಿದ ರೊಟ್ಟಿ
ಈ ಚಂದ್ರ ?
ಯಾವ ಭಗದಿಂದ
ಉದುರಿದ ಬೀಜ
ಈ ಭೂಮಿ?
ಯಾವ ಮರದಿಂದ ಚಾಚಿದ ಎಲೆ
ಈ ಆಕಾಶ?

85

ಶೃಂಗರಿಸಿದ ಮದುಮಗಳು
ನಿಖಾ ದಿನದಂದೇ ಕುಸಿದು
ಪ್ರಾಣ ಬಿಟ್ಟಳು
ಕೆಲವೇ ನಿಮಿಷಗಳಲ್ಲಿ
ಅವಳು ತನ್ನ ಮದುಮಗನನ್ನು
ಬದಲಿಸಿಕೊಂಡಳು
ಅವಳನ್ನೀಗ ಹೊಸದಾಗಿ ಮೀಯಿಸಬೇಕಾಗಿದೆ
ಹೊಸದಾಗಿ ಶೃಂಗರಿಸಬೇಕಾಗಿದೆ

86

ಕಣ್ಣಿಗೆ ಪಟ್ಟಿ ಕಟ್ಟಿ
ಬದುಕೊಳಗೆ ತಳ್ಳಿ ಬಿಟ್ಟೆ
ನನ್ನ ನಿನ್ನ ನಡುವೆ
ಇದು ಕಣ್ಣಾ ಮುಚ್ಚಾಲೆ ಆಟ
ದೊರೆಯೇ,
ಸಾವೆಂದರೆ
ನೀನು ನನ್ನ ಕಣ್ಣ
ಪಟ್ಟಿ ಬಿಚ್ಚಿದ ದಿನ

87

ಕೆಟ್ಟು ಹೋದ ಕೈ ಗಡಿಯಾರವನ್ನು
ಶೋಕಿಗಾಗಿ ಕಟ್ಟಿಕೊಂಡು
ಓಡಾಡುವವನಿಗೆ
ಸಮಯವೇ ಪಾಠ ಕಲಿಸುತ್ತದೆ

88

ಆತ್ಮ
ಹತ್ಯೆಗೈದ
ಎಂದು ನಿಂದಿಸಬೇಡಿ
ಆಟಕ್ಕೆ ಹೆದರಿ
ಮಧ್ಯದಲ್ಲೇ
ಮೈ
ದಾನ
ದಿಂದ
ತಾಯ ಮಡಿಲು ಸೇರಿದ
ಮಗು ಅವನು

89

ಚದುರಿದ ದಾಳಿಂಬೆ
ಹಣ್ಣಿನ
ಮಣಿಗಳ ಮರು ಜೋಡಿಸಲು
ಕುಳಿತೆ
ಒಂದು ಹಣ್ಣನ್ನು
ಜೋಡಿಸುವಷ್ಟರಲ್ಲಿ
ನಾನು ಹಣ್ಣಾಗಿದ್ದೆ !

90

ನನ್ನನ್ನು ಸಹಿಸಿ ಕೊಳ್ಳಲಾಗದ ಮೌಲ್ವಿ
ಒಂದು ದಿನ
ಬೆತ್ತ ಹಿಡಿದು ಬಲವಂತದಿಂದ
ಮದರಸದಿಂದ ಹೊರ ದಬ್ಬಿದರು
ನನ್ನ ಅಧ್ಯಾತ್ಮದ ಕಲಿಕೆ
ಅಲ್ಲಿಂದಲೇ ಆರಂಭವಾಯಿತು!

91

ನೆನಪಿರಲಿ
ಈ ದಾರಿಯಲ್ಲಿ ಹೋದವರು
ಯಾರೂ ಮರಳಿ ಬಂದಿಲ್ಲ
ಈ ದಾರಿ ಬಿಟ್ಟರೆ ಹೊರಡಲು
ಇನ್ನೊಂದು ದಾರಿಯೂ ಇಲ್ಲ

92

ಈ ಭೂಮಿಯೆಂಬ
ತಾಯ ಗರ್ಭದಲ್ಲಿ
ಮುಳುಗೇಳುತ್ತಿದ್ದೇನೆ
ಹೆರಿಗೆಗಾಗಿ ಕಾಯುತ್ತಿರುವ
ಶಿಶು ನಾನು

93

ಇತ್ತೀಚೆಗೆ
ಹಕ್ಕಿ, ಇರುವೆ, ಮರ, ಗಿಡಗಳ
ಭಾಷೆಯಷ್ಟೇ ನನಗೆ ಅರ್ಥವಾಗುತ್ತಿದೆ
ಮನುಷ್ಯನ ಮಾತುಗಳು
ಮೂಕನ ಆಕ್ರಂದನದಂತಿದೆ

94

ನನ್ನ ವಯಸ್ಸನ್ನು
ಲೆಕ್ಕ ಹಾಕುತ್ತಿದ್ದೇನೆ
ಕೆಲವು ದಿನಗಳನ್ನು
ಹಲವು ವರ್ಷಗಳ ಕಾಲ
ಬದುಕಿದ್ದೇನೆ...
ಲೆಕ್ಕ ತಪ್ಪುತ್ತಿದೆ

95

ಇನ್ನೊಬ್ಬರಿಗೆ ಕೊಟ್ಟು
ದರಿದ್ರನಾದೆ ಎಂದ
ಒಬ್ಬನನ್ನೂ
ನಾನೀವರೆಗೆ ನೋಡಿಲ್ಲ

96

ಪ್ರವಾದಿಯ ಗಡ್ಡ ದೊರಕಿದೆ
ಎಂದು ಪುರೋಹಿತರು
ಸಂತೆಯಲ್ಲಿ ಕೂಗಿ ಕರೆದರು
ಜನರು ಮುಗಿ ಬಿದ್ದರು
ಮುರಿದು ಬಿದ್ದ ವಿಗ್ರಹಗಳು
ಜೀವ ತಳೆದು ಗಹ ಗಹಿಸಿ ನಕ್ಕವು!

97
ಹುಟ್ಟು ಕುರುಡನೊಬ್ಬನಿಗೆ
ಇಳಿ ವಯಸ್ಸಲ್ಲಿ ಕಣ್ಣು ಬಂದು
ಕೈಯಲ್ಲಿದ್ದ ಹೂವಿನ ಎಸಳ ಬಣ್ಣಗಳನ್ನು
ವಿಸ್ಮಿತನಾಗಿ ನೋಡುವಂತೆ
ನಾನು ನಿನ್ನ ಮುಂದೆ !

98
ನನ್ನ ಕಣ ಕಣಗಳಲ್ಲೂ
ನೀನಿರುವೆ ಎಂದ ಮೇಲೆ
ನಾನೆಲ್ಲಿರುವೆ?
ನನ್ನ ನೆಪದಲ್ಲಿ
ಬದುಕುತ್ತಿರೋದು ನೀನೆನ್ನೋದನ್ನು
ಈ ದಿನ ಅರಿತೆ

99
ಇದು ಪ್ರವಾದಿಯ ಗಡ್ಡ ಎಂದರು
ನೆರೆದವರು ಅಡ್ಡ ಬಿದ್ದರು
ಸತ್ತವರ ಗಡ್ಡಕ್ಕಿಂತ ಬದುಕಿದವರ ಗಡ್ಡ
ಹೆಚ್ಚು ಅಪಾಯಕಾರಿ ಎನ್ನೋದು ಹೊಳೆದು
ನನ್ನ ಗಡ್ಡವನ್ನು ಬೋಳಿಸಿ ಬಿಟ್ಟೆ

100
ಭೂಮಿಯ ಸಣ್ಣ ಕಂಪನವೊಂದಕ್ಕೆ
ಮನುಷ್ಯ ಕಟ್ಟಿದ ಮನೆ, ಮಠ, ತೋಟ
ಎಲ್ಲ ಬುಡ ಕಳಚಿ ಬಿತ್ತು
ಆದರೂ ಅವನ ದುರಹಂಕಾರದ
ಅಡಿಪಾಯ ಅಲುಗಾಡಲಿಲ್ಲ !

101
ತುಂಬಿದಷ್ಟೂ ಬೇಕು ಎನ್ನುವ
ಈ ಗೋರಿಗಳ
ಹಸಿವು ಇಂಗಿಸಲು
ಹೆಣ
ಗುತ್ತಲೇ ಇದ್ದಾಳೆ
ಸೂಲಗಿತ್ತಿ

102
ಸುಸ್ತಾಗಿದೆ
ಸ್ವಲ್ಪ ವಿಶ್ರಾಂತಿ ಬೇಕು
ಎಂದವನು
ಗೋರಿಯೊಳ ಸೇರಿ
ಮಣ್ಣೆಳೆದುಕೊಂಡ

103
ಆತನ ಗೋರಿಯನ್ನು ಸಂದರ್ಶಿಸಲು
ಪ್ರತಿ ದಿನ ಲಕ್ಷಾಂತರ ಜನರು ಬರುವರು

ಆದರೆ ಅವರಿಗೆ ಗೊತ್ತಿಲ್ಲ
ಆ ಗೋರಿಯೊಳಗೆ
ಆತನ ದೇಹವಿಲ್ಲ
ಆತನ ಗಡ್ಡ, ಉಗುರು, ಹಲ್ಲು, ಚರ್ಮ
ಎಲ್ಲವನ್ನು ಅನುಯಾಯಿಗಳು ಕಿತ್ತು
ಸಂತೆಯಲ್ಲಿ ಭರ್ಜರಿ ವ್ಯಾಪಾರ ನಡೆಸುತ್ತಿದ್ದಾರೆ

ಆ ಗೋರಿಯಲ್ಲಿ ಆತನ
ಚಿಂತನೆ, ಆಲೋಚನೆಗಳಷ್ಟೇ
ಮಲಗಿವೆ

104
ಹಜ್ ಯಾತ್ರೆಗೆಂದು
ಜೀವನ ಪೂರ್ತಿ ಕೂಡಿಟ್ಟ ಹಣವನ್ನು
ನೆರೆ ಮನೆಯ ಬಡ ಹೆಣ್ಣು ಮಗಳ
ಮದುವೆಗೆ
ಕೊಟ್ಟು ಬಿಟ್ಟ
ಅಚ್ಚರಿಯೆಂದರೆ, ಹಜ್ ದಿನ ಕಾಬಾ
ಅವನ ಮನೆ ಮುಂದೆ ನಿಂತಿತ್ತು !!

105

ಹಜ್ಜ್ ಯಾತ್ರಿಕ
ಮಕ್ಕಾದಲ್ಲಿ ಕೊಟ್ಟ ಕೂದಲು,
ತಿರುಪತಿಯಲ್ಲಿ
ಭಕ್ತ ಕೊಟ್ಟ ಮುಡಿ
ಯಾವ ಯಾವುದೋ ಊರನ್ನೆಲ್ಲ ದಾಟಿ
ಒಂದೇ ಗೋಣಿಚೀಲದೊಳು ಒಂದಾದವು !
ತಕ್ಕಡಿಯಲ್ಲಿ ತೂಗಿದವನು
ಎರಡಕ್ಕೂ ಒಂದೇ ಬೆಲೆ ಕಟ್ಟಿ ಬಿಟ್ಟ !!

106

ನನ್ನ ಗುರುವಿನ ಗೋರಿಯ ಮೇಲೆ
ಹೊದಿಸಿದ ಚಾದರಗಳನ್ನು ನೋಡುತ್ತಿರುವಾಗ
ಆತ ಸತ್ತಿರೋದು ದಿಟ ಎನ್ನಿಸುತ್ತದೆ
ಈ ಶಿಷ್ಯ ಹೀಗೆ
ದರ್ಗಾದ ಹೊರಗೆ
ಚಳಿಯಲ್ಲಿ ನಡುಗುತ್ತಿರುವಾಗ
ಆತ ಅಷ್ಟೂ ಚಾದರಗಳನ್ನು
ಒಬ್ಬನೇ ಹೊದ್ದು ಮಲಗುತ್ತಿರಲಿಲ್ಲ

107

ಈ ಭೂಮಿ ಎಷ್ಟು
ಪುರಾತನ ಎಂದರೆ
ನಡೆಯುತ್ತಿರುವಾಗ ದಾರಿಯುದ್ದಕ್ಕೂ
ಯಾರ್ಯಾರದೋ
ಗೋರಿಗಳನ್ನು ಎಡವುತ್ತಿರುವ
ಭಾವ !

108

ಆ ಗೋರಿಯ ಮೇಲಿನ ಗಿಡ
ಹೂ ಬಿಟ್ಟಿದೆ
ಕಿತ್ತು ಮುಡಿದುಕೊಳ್ಳುವ ಧೈರ್ಯ
ಯಾರಲ್ಲೂ ಕಾಣುತ್ತಿಲ್ಲ !

109

ಭದ್ರತೆಗಾಗಿ ಬಾಗಿಲೇ ಇಲ್ಲದ
ಮನೆ ಕಟ್ಟಿದ
ನಾಲ್ಕೂ ದಿಕ್ಕುಗಳಲ್ಲಿ ಗೋಡೆಗಳು
ಇದೀಗ ಮನೆಯೊಳಗಿಂದ
ಹೊರ ಬರುವ ದಾರಿ ತಿಳಿಯದೇ
ಬೆಂದು ಹೋಗಿದ್ದಾನೆ
ಹೊರ ಹೋಗುವುದಕ್ಕಾಗಿಯಾದರು
ಒಂದು ಬಾಗಿಲು ಇಡಬೇಕಿತ್ತೆಂದು
ಕರುಬುತ್ತಿದ್ದಾನೆ !

110

ಗಂಗೆಯ ನೀರು ಕೊಳೆತು ಹೋಗಿದೆ
ಝುಂ ಝುಂ ನೀರು ಕೆಂಪಾಗಿದೆ
ಸಾವಿನಂಗಳದಲ್ಲಿ ಮಲಗಿರುವಾಗ
ನನ್ನ ಒಣಗಿದ ತುಟಿಗಳಿಗೆ ಹನಿಸೂದಕ್ಕೆ
ನನ್ನೂರ ಬಾವಿಯ ತಿಳಿ ನೀರೇ ಸಾಕು
ನೆನಪಿರಲಿ

111

ರಮಝಾನ್ ಮತ್ತೆ ಬಂದಿದೆ
ಉಪವಾಸ ನನಗೆ ಕಷ್ಟವಿಲ್ಲ
ಆದರೆ ...
ತುಂಡು ಖರ್ಜೂರಕ್ಕೂ ಇಲ್ಲಿ
ತತ್ವಾರವಿದೆ
ಉಪವಾಸವನ್ನು
ಯಾವುದರ ಜೊತೆ ತೊರೆಯಲಿ ?

112

ನಮಾಝಿನ ಸಿದ್ಧತೆಯಲ್ಲಿದ್ದ
ಅಪರಿಚಿತನೊಬ್ಬ ಕಾಬಾದ ದಿಕ್ಕು ಕೇಳಿದ
ನದಿ, ಗಾಳಿ, ಬೆಳಕು
ಹಕ್ಕಿ, ಮರಗಳು
ಮುಖ ಮಾಡಿದ ದಿಕ್ಕನ್ನು ತೋರಿಸಿದೆ

113

ಹಿತ್ತಿಲಲ್ಲಿ ಗುಡ್ಡೆ ಬಿದ್ದು
ನಾರುತ್ತಿರುವ ಉಪದೇಶಗಳ ಗೊಬ್ಬರ
ಬಿತ್ತೂದಕ್ಕೆ ಬೀಜವಿಲ್ಲ,
ಉಳುವುದಕ್ಕೆ ಗದ್ದೆಯಿಲ್ಲ

114

ಮೇಲೇರುವುದಕ್ಕೆ ಹೆದರುತ್ತಾ
ಒಂದೊಂದೇ ಮೆಟ್ಟಿಲೇರಿ
ತುದಿ ತಲುಪಿದವನಿಗೆ
ನೆಲ ನೋಡೂದಕ್ಕೀಗ ಭಯ !

115

ಬೆಕ್ಕು ಕಣ್ಣನ್ನು ಮುಚ್ಚಿದೆ !
ತಾನೇ ಸೃಷ್ಟಿಸಿಕೊಂಡ ಕತ್ತಲಲ್ಲಿ
ಸ್ವತಂತ್ರವಾಗುವ ತವಕದಲ್ಲಿದೆ !
ಬೆಕ್ಕನ್ನು ಸುತ್ತುವರಿದ ಬೆಳಕು
ಚಪ್ಪರಿಸುತ್ತಿರುವ ಹಾಲನ್ನು
ವಿಷಾದದಿಂದ ನೋಡುತ್ತಿದೆ !

116

ಆ ದಿನ ಇನ್ನೂ ನೆನಪಿದೆ...
ಅಂದು ರಮಝಾನ್ ಉಪವಾಸ
ಮಧ್ಯಾಹ್ನ ಕರುಳು ಸುಡುವ ಹಸಿವು
ಇನ್ನು ತಡೆಯಲಾರೆ ಎಂದು
ಅಕ್ಕ ಪಕ್ಕ ಇಣುಕಿ
ಪರಿಚಿತರಾರು ಇಲ್ಲ ಎನ್ನೋದು ಸ್ಪಷ್ಟವಾದದ್ದೇ
ಅನ್ನದ ತಟ್ಟೆ ಕೈಗೆತ್ತಿಕೊಂಡೆ
ಗಬ ಗಬ ಉಣ್ಣುತ್ತಿರುವಾಗ
ಅನ್ನ ನೆತ್ತಿಗೇರಿ ಕೆಮ್ಮು ಉಕ್ಕಿ ಬಂತು
ಯಾರೋ ಪಕ್ಕದಲ್ಲಿ ಪಿಸುಗುಟ್ಟಿದರು
"ನೀರು ಕುಡಿ, ನೀರು ಕುಡಿ"
ತಲೆ ಎತ್ತಿ ನೋಡಿದರೆ
ನನ್ನ ದೊರೆ
ನೀರಿನ ಲೋಟ ಹಿಡಿದು ನಿಂತಿದ್ದ!!

117

ಧರ್ಮ ಪುರೋಹಿತರು
ಬಿತ್ತಿ ಬೆಳೆಸಿದ ಬೇಲಿ,
ಗಡಿಗಳಾಚೆ ನಿಂತು
ನನ್ನ ದೊರೆ ನನಗಾಗಿ
ಕಾಯುತ್ತಿದ್ದಾನೆ !

118

ಈ ಬದುಕು
ಎಂದರೆ ಏನು?
ಅಂಗೈಯಲ್ಲಿ ಬೆಣ್ಣೆ ಇಟ್ಕೊಂಡು
ಊರೆಲ್ಲ ತುಪ್ಪಕ್ಕಾಗಿ ಹುಡುಕಾಡೋದು!

119

ನನ್ನ ಮರಣವ
ಕಂಡು ಅವರು ಉದ್ಗರಿಸುತ್ತಾರೆ
ಇವನು ಮಹಮದೀಯನಲ್ಲ,
ಕ್ರಿಶ್ಚಿಯನ್ನನಲ್ಲ,
ಯಹೂದಿಯಲ್ಲ
ಹಿಂದೂ ಅಂತೂ ಅಲ್ಲವೇ ಅಲ್ಲ
ಈ ಮರಣ ಕೂಗಿ ಹೇಳುತ್ತಿದೆ
ಇವನೊಬ್ಬ ಶರಣ!

120

ನನ್ನ ಹೆಸರು
ನಾನು ಹೊತ್ತುಕೊಂಡ ಶಿಲುಬೆ
ಒಂದಲ್ಲ ಒಂದು ದಿನ
ನಾನದನ್ನು ಏರಲೇ ಬೇಕು

121
ಧರಿಸಿದ ಈ ಬಟ್ಟೆ
ಹೊಲಿಗೆ ಬಿಟ್ಟಿದೆ
ಕಪ್ಪು ಕಲೆಗಳು ಒಗೆದಷ್ಟೂ
ಅಂಟಿ ಕೊಳ್ಳುತ್ತಿವೆ
ಈ ಬಟ್ಟೆಯನ್ನು ಹರಿದೆಸೆದು
ಹೊಸ ಬಟ್ಟೆಯೊಳಗೆ ಪ್ರವೇಶಿಸುವ
ಆಸೆ ಹುಟ್ಟಿದೆ !

122
ನಾನು ನಮಾಝಿಗೆ ನಿಂತಲ್ಲೇ
ನನ್ನ ಮಸೀದಿ
ದೊರೆಗೆ ಬಾಗುವ ಮನಸಾದರೆ
ಮಸೀದಿಯೇ ನನ್ನೆಡೆಗೆ
ಓಡೋಡಿ ಬರುವುದು

123
ಹಂದಿಯಿರಲಿ, ಗೋಮಾಂಸವಿರಲಿ
ಎಸೆಯುವುದೇನೋ ಎಸೆದು ಬಿಟ್ಟಿರಿ
ಮಸೀದಿ, ದೇವಸ್ಥಾನದ ಮುಂದೆ ಯಾಕೆ ಎಸೆದಿರಿ?
ಹಸಿದವನ ಮನೆಯ ಅಂಗಳಕ್ಕೆ ಎಸೆಯ ಬಹುದಿತ್ತು
ಬಡವನ 'ಮನೆ' ಉರಿಯುವ ಬದಲು,
'ಒಲೆ' ಉರಿಸಿದ ಪುಣ್ಯ ನಿಮ್ಮದಾಗುತ್ತಿತ್ತು

124

ನನ್ನ ಮಸೀದಿಯ ಧ್ವಂಸಗೈದವರಿಗೆ
ಕೃತಜ್ಞತೆಗಳು
ಈಗ ತೆರೆದ ಹಸಿರು ಬಯಲೇ ನನ್ನ ಮಸೀದಿ
ಹಿಮಾಲಯದ ಬೆಟ್ಟಗಳೇ ಇಲ್ಲಿನ ಮಿನಾರಗಳು
ಮುಂಜಾವಿನ ಹಕ್ಕಿ ಕಲರವವೇ ನನ್ನ ಅಝಾನ್
ಚಲಿಸುತ್ತಿರುವ ಸೂರ್ಯನೇ ನನ್ನ ಕಾಬಾ
ಹಿಂದೂ ಮಹಾಸಾಗರದ ತೀರದಲ್ಲಿ ಕುಳಿತು
ವುಝೂ ಮುಗಿಸಿ ಶುದ್ಧಿಯಾಗಿದ್ದೇನೆ
ಈ ಮಸೀದಿಯ ವೈಭವಕ್ಕೆ ದಂಗಾಗಿದ್ದೇನೆ
ನನ್ನ ದೊರೆಗೆ ಬಾಗಿದ್ದೇನೆ



ನನ್ನ ಮಸೀದಿಯ ಧ್ವಂಸಗೈದವರಿಗೆ ಕೃತಜ್ಞ...

ಸೂಫಿಯ ಕಣ್ಣಲ್ಲಿ ಹನಿಗಳು



....ಕಾಗದದ ದೋಣಿಯೇರಿ ಬೆಂಕಿಯ ನದಿ
ದಾಟಬಯಸುವ ಕವಿಗೆ ಜೀಳುವ ಕನಸಿನ ಸ್ವರ್ಗದಲ್ಲಿ
ಧರ್ಮ ಬೋಧಕರಾರೂ ಕಾಣಿಸದಾದಾಗ
ಅಚ್ಚರಿಯಾಗುತ್ತದೆ. ಭೂಮಿಯ ಮೇಲೆ ಕಟ್ಟಲಾದ
ಮಂದಿರ, ಮಸೀದಿ, ಚರ್ಚುಗಳನ್ನು ಹಾದು ಬರುವ ಗಾಳಿ,
ಉಬ್ಬಸ ತರಿಸುತ್ತದೆ. ನಿಜಭಕ್ತ ಮುಖ ಮಾಡಿದತ್ತ
'ಕಾಬಾ' ದಿಕ್ಕು ಬದಲಿಸುತ್ತದೆ ಎಂಬ ಕನಕನಂಬಿಕೆಯ
ಕವಿಗೆ, ಅರಮನೆಗೆ ಮುಖಮಾಡಿ ಪ್ರಾರ್ಥನೆ ಸಲ್ಲಿಸುವ
ಪುರೋಹಿತರ ಬಗ್ಗೆ ಭಯಂಕರ ಸಿಟ್ಟಿದೆ.
'ಎಸೆಯುವುದೇ ಆದರೆ ಹಂದಿಮಾಂಸ,
ಗೋಮಾಂಸಗಳನ್ನು ಮಂದಿರ-ಮಸೀದಿಗಳ
ಪ್ರಾಂಗಣಕ್ಕೆಸೆಯದೆ, ಹಸಿದವನ ಮನೆಯ ಅಂಗಳಕ್ಕೆ
ಎಸೆಯಿರಿ' ಎಂದು ಪ್ರಾರ್ಥಿಸುವ ಇವರಿಗೆ,
ಉಣ್ಣುವುದೂ ಬಡಭಕ್ತನಿಗೆ ಒಂದು ಬಗೆಯ
ಪ್ರಾರ್ಥನೆಯೆಂಬ ನಂಬಿಕೆಯಿದೆ.
ನರಕದ ಹೆಬ್ಬಾಗಿಲಲ್ಲಿ ದಾನಿಗಳ ಹೆಸರು ಕೆತ್ತುವ
ಬಶೀರರ ಕವನಗಳನ್ನು ಓದುವುದು ತೀರಾ ಸುಲಭ
ಮತ್ತು ಬಹಳ ಕಷ್ಟ.
'ಹಸಿದ ನಾಯಿಗೆ ತುತ್ತು ಉಣಿಸಿದಾತನಿಗೆ ನೀನು
ಸ್ವರ್ಗವನಿತ್ತೆ' ಎಂಬ ಸುದ್ದಿ ಕೇಳಿದಂದಿನಿಂದ ಹಸಿದವರ
ಕಣ್ಣುಗಳಲ್ಲಿ ನನ್ನ ಮಸೀದಿಯನ್ನು ಕಾಣುತ್ತಿದ್ದೇನೆ'
ಎನ್ನುವ ಅಪರೂಪದ ಈ ಪದಮಾಂತ್ರಿಕ,
ತುಂಬಿದಷ್ಟೂ 'ಬೇಕು' ಎನ್ನುವ ಗೋರಿಗಳ ಹಸಿವು
ಇಂಗಿಸಲು ಹೆಣಗುವ ಸೂಲಗಿತ್ತಿಯಂತೆ ಕಾಣಿಸುತ್ತಾರೆ.
ಅಭಿನಂದನೆಗಳು.

-ಬೊಳುವಾರು

ನನ್ನ ಮಸೀದಿಯ ಧ್ವಂಸಗೈದವರಿಗೆ ಕೃತಜ್ಞ  ಸೂಫಿಯ ಕಣ್ಣಲ್ಲಿ ಹನಿಗಳು  ಬಿ.ಎಂ. ಬಶೀರ್